ಬದಲಾಯಿಸಿ ಮದುವೆಯಾಗುತ್ತಿರುವ ವಧು, ವರರ ಹೆಸರು ಸೇರಿಸಿ ಎಲ್ಲರೊಡನೆ ಹಾಡುವ ಅಭ್ಯಾಸವೊಂದಿತ್ತು. ಹೀಗಾಗಿ ಅವರಿಗೆ ಡಿಮ್ಯಾಂಡ್ ಬಹಳವಿತ್ತು. ನಮ್ಮ ಇನ್ನೊಬ್ಬ ಬಂಧು 'ಎರಡು ಕನಸು' ರಿಲೀಸ್ ಆದಾಗ ಅದರ ಆರಂಭದಲ್ಲಿ ಬರುವ 'ಎಂದು ನಿನ್ನ ನೋಡುವೆ ' ಹಾಡನ್ನು ಪ್ರತಿದಿನ ಥಿಯೇಟರಿಗೆ ಹೋಗಿ ನೋಡಿಕೊಂಡು ಬರುತ್ತಿದ್ದರು. ಸಿನಿಮಾದ ಹಾಗೆ ಅವರೂ ತಮಗೆ ತಾವೇ ಶತದಿನೋತ್ಸವ ಆಚರಿಸಿಕೊಂಡರು ಎಂಬುದು ಯಾರಿಗೂ ತಿಳಿಯದ ಸುದ್ದಿ.

ನಮ್ಮೂರ ಸಿನಿಮಾ ಟೆಂಟು ಹಲವು ಹಾಡುಗಳ ಆವಾಸ ಸ್ಥಾನವಾಗಿತ್ತು. 'ಗಜಮುಖನೇ ಗಣಪತಿಯೇ' ಹಾಡಿನ ಮೂಲಕ ಶುರು ಮಾಡಿ 'ಆರತಿ ಭಾರತಿ ಕಲ್ಪನ ಮಂಜುಳ ಚಂದ್ರಕಲಾ, ಇವರೇ ನಮ್ಮ ಕಲಿಯುಗದ ಪಂಚ ಕನ್ಯೆಯರು' (ಅದ್ಯಾಕೋ ನಮ್ಮ ಮನೆಯಲ್ಲಿ ಅಹಲ್ಯಾ, ದ್ರೌಪದಿ, ಸೀತಾ , ತಾರಾ, ಮಂಡೋದರಿ ತಥಾ ಎಂದು ಹೇಳುತ್ತಿದ್ದರಪ್ಪ) ಎಂಬ ಹಾಡು ಹಾಕಿ ಆಮೇಲೆ ಇನ್ನೇನು ಸಿನಿಮಾ ಶುರುವಾಗುತ್ತದೆ ಎನ್ನುವಾಗ 'ಫಲಿಸಿತು ಒಲವಿನ ಪೂಜಾ ಫಲ' ಹಾಡಿನ ಹಿನ್ನೆಲೆಯಲ್ಲಿ 'ಬೀಡಿ ಸಿಗರೇಟು ಸೇದಬಾರದು' ಎಂಬ ಬೋರ್ಡು ತೋರಿಸುತ್ತಿದ್ದರು. ಅಷ್ಟೊತ್ತಿಗಾಗಲೇ ಬೀಡಿ ಸಿಗರೇಟುಗಳ ಹೊಗೆ ಪ್ರೊಜೆಕ್ಟರಿನ ಕಿರಣಗಳ ಜೊತೆ ಸೇರಿ ಅಲ್ಲೊಂದು ಹೊಸ ವರ್ಣ ಪ್ರತಿಫಲನವಾಗಿರುತ್ತಿತ್ತು. ಬಹುಶಃ ಆ ಹಾಡಲ್ಲಿ ನಾಗಸ್ವರ, ಮಂತ್ರ ಎಲ್ಲವೂ ಬರುತ್ತದೆಯಾಗಿ ಅದನ್ನು ಭಕ್ತಿಗೀತೆ ಎಂದೇ ರೀಲು ಬಿಡುವವನು ತಿಳಿದಿದ್ದನೇನೋ. ನನ್ನ ಮನಸ್ಸಿನಲ್ಲಂತೂ ಈ ಹಾಡನ್ನು ಗಾರೆ ಹಾಕಿ ಕೂರಿಸಿಬಿಟ್ಟಿದ್ದಾನೆ. ಇನ್ನು ಮುಂದಿನ ವಿದ್ಯಾಭ್ಯಾಸಕ್ಕಾಗಿ ದಾವಣಗೆರೆ ಎಂಬ ಫಾರಿನ್‌ಗೆ ಬಂದಾಗ ಚಿತ್ರಗೀತೆ ಕೇಳುವಿಕೆಗೆ ಇನ್ನೊಂದು ಆಯಾಮ ಪ್ರಾಪ್ತವಾಯಿತು. ಊರ ತುಂಬಾ ಜಾತಿಗೊಂದರಂತೆ ಹಾಸ್ಟೆಲ್‌ಗಳು (ಇಂದಿಗೂ!) ಅದಕ್ಕನುಗುಣವಾಗಿ ಬೀದಿ ತುಂಬಾ ಒಂದರ ಪಕ್ಕ ಒಂದು ಸಾಲು ಸಾಲು ಟೀ ಸ್ಟಾಲ್‌ಗಳು. ಆದರೆ ಅವು ಜಾತ್ಯತೀತ. ಪ್ರತಿಯೊಂದರಲ್ಲೂ ನಮ್ಮಂತಹ ವಿದ್ಯಾರ್ಥಿಗಳನ್ನು ಸೆಳೆಯಲು ಚಿತ್ರಗೀತೆಗಳು. ಈ ತುದಿಯಿಂದ ರಸ್ತೆಯ ಆ ತುದಿಯವರೆಗೆ ಈಗಿನ ಸೀರಿಯಲ್‌ಗಳಲ್ಲಿ ನಡೆಯುತ್ತಾರಲ್ಲ ಹಾಗೆ ನಿಧಾನವಾಗಿ ನಡೆದಲ್ಲಿ ಪ್ರತಿ ಹಾಡಿನ ಎರಡೆರಡು ಸಾಲು ಕೇಳಿಕೊಳ್ಳುವ 'ಮಿಶ್ರ ಮಾಧುರ್ಯ'. ತಿಂಗಳಲ್ಲಿ ಎರಡು ಮೂರು ಸಲ ಮಾತ್ರ ಟೀ ಕುಡಿಯಲು ದುಡ್ಡು ಇರುತ್ತಿದ್ದುದರಿಂದ ಅದನ್ನೇ ಬೈಟು, ಮಿನಿ, ಕಾಲು, ಗೀಲು ಮಾಡಿಕೊಂಡು ನಾವು ಸ್ನೇಹಿತರು ಅದನ್ನು ಆರೇಳು ಸಲಕ್ಕೆ ಹೆಚ್ಚಿಸಿಕೊಳ್ಳುತ್ತಿದ್ದೆವು. ಆಗ ಚಲಾವಣೆಯಲ್ಲಿದ್ದ ಮತ್ತು ನನಗೆ ಪ್ರಿಯವಾಗಿದ್ದ ಹಾಡು ಮೂರು. ಅವೆಂದರೆ 'ಆಲೆಮನೆ ' ಚಿತ್ರದ 'ನಮ್ಮೂರ ಮಂದಾರ ಹೂವೇ'. ಹಾಗು ಆಗಷ್ಟೆ ಎಂಟ್ರಿ ಕೊಟ್ಟಿದ್ದ ಅಶ್ವತ್ಥ್ ಹಾಡಿದ 'ಎಲ್ಲ ಮೇಲು ಕೀಳು ಸುಳ್ಳು ಭೇದ ಭಾವ ಬಗೆದ' ಎಂಬ ವಿಶಿಷ್ಟ ಟ್ಯೂನ್‌ನ ಹಾಡು. ಮತ್ತೊಂದು 'ಸುಖದಾ ಸ್ವಪ್ನಗಾನ' ಎಂಬ ಅಯೋಮಯ ಮರೆಯದ ಹಾಡು. ನನ್ನ ಜೇಬಲ್ಲಿ ಕಾಸಿದ್ದಾಗ, ನಾನು ಅಲ್ಲಿಗೆ ಹೋದಾಗ, ನಾನು ಆಯ್ಕೆ ಮಾಡಿಕೊಂಡ ಕಾಫಿಬಾರ್‌ನಲ್ಲಿ ಕೂತಾಗ ಪರಮಾತ್ಮನು ಅವನಿಗೆ ಯಥೋಚಿತ ಬುದ್ಧಿ ಕೊಟ್ಟು, ಅದೇ ವೇಳೆಯಲ್ಲಿ ನನ್ನ ಆಯ್ಕೆಯ ಹಾಡನ್ನು ಹಾಕಿದಲ್ಲಿ ಮಾತ್ರ ನನಗೆ ಅದನ್ನು ಕೇಳುವ 'ಕಾಫಿಭಾಗ್ಯ' ಮತ್ತು 'ಹಾಡಿನ ಭಾಗ್ಯ'. ಹೀಗೂ ಒಂದೆರಡುಸಲ ಆಗಿಬಿಟ್ಟಿತ್ತು. ದೇವರು ತನ್ನ ಇರುವಿಕೆಯನ್ನು ಸಾಬೀತು ಪಡಿಸಲು ಸದಾ ಹೊಸ ಹೊಸ ಮಾರ್ಗ ಹುಡುಕುತ್ತಿರುತ್ತಾನೆ.

ಆದರೆ ಈ ದೇವರು ಮಾಸ್ಟರ್ ಡಿಗ್ರಿ ಮಾಡಲು ನಾನು ಮೈಸೂರಿಗೆ ಬಂದಾಗ ಸ್ವಲ್ಪ ಕಾಲ ಕೈಕೊಟ್ಟ. ದಾವಣಗೆರೆ ನನಗೆ ಫಾರಿನ್ ಆಗಿದ್ದರೂ ಮೈಸೂರು ಕೇಂಬ್ರಿಡ್ಜ್ ಆಕ್ಸ್‌ಫರ್ಡ್‌ಗೆ